**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 23-10 -2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಮಂಜುಳಾ ವಕೀಲರವರಿಂದಃ

ನಾನು ಡಿ ಹೊಸಹಳ್ಳಿಯಲ್ಲಿ ವಾಸಿಸುತ್ತಿದ್ದೇನೆ. ಪ್ರಸ್ತುತ 63 ವರ್ಷ. ನಾನು 40 ವರ್ಷದಿಂದ ವ್ಯವಸಾಯ ಮಾಡುತ್ತಿದ್ದೇನೆ. 6-7 ಎಕರೆ ಜಮೀನು ಇದೆ. ಸದರಿ ಜಮೀನು ಇದೆ ಎಂದು ತೋರಿಸಲು ಆರ್ ಟಿ ಸಿ ಹಾಜರುಪಡಿಸುತ್ತೇನೆ. ಸದರಿ ಜಮೀನಿನಲ್ಲಿ ಕಬ್ಬು, ಭತ್ತ, ತೆಂಗು ಮತ್ತು ರೇಷ್ಮೆ ಬೆಳೆಯುತ್ತೇನೆ. ಮನೆಯಲ್ಲಿ ನನ್ನ ತಾಯಿ, ನನ್ನ ಹೆಂಡತಿ ಮತ್ತು ನನ್ನ ಇಬ್ಬರು ಮಕ್ಕಳು ಹಾಗೂ ಒಂದು ಗಂಡುಮಗ ಇದ್ದೆವೆ. ಹೆಣ್ಣುಮಕ್ಕಳಿಗೆ ಮದುವೆಯಾಗಿದೆ. ಹೆಣ್ವುಮಕ್ಕಳ ಮದುವೆಯವರೆಗೆ ಅವರ ಖರ್ಚು ವೆಚ್ಚವನ್ನು ನೋಡಿಕೊಂಡಿದ್ದೇನೆ. ಒಬ್ಬ ಮಗಳ ಮದುವೆ 5 ವರ್ಷದ ಹಿಂದೆ ಮತ್ತೊಬ್ಬರ ಮದುವೆ 8 ತಿಂಗಳ ಹಿಂದೆ ಮಾಡಿದ್ದೇನೆ. 2 ಎಕರೆ ಜಮೀನು ಕಬ್ಬು, 1 ಎಕರೆ ಭತ್ತ, 1 ವರೆ ಎಕರೆ ತೆಂಗಿನತೋಟ, 30 ಗುಂಟೆ ರೇಷ್ಮೆ ಬೆಳೆಯುತ್ತೇನೆ. ಸದರಿ ಬೆಳೆಗಳಿಂದ ವಾರ್ಷಿಕ ಸುಮಾರು 6-7 ಲಕ್ಷ ಆದಾಯವಿದೆ. ಸದರಿ ಬೆಳೆಗೆ ಎಷ್ಟು ಖರ್ಚಾಗುತ್ತದೆ ಎಂದರೆ ಸಾಕ್ಷಿಯು ಖರ್ಚನ್ನು ಕಳೆದು 6-7 ಲಕ್ಷ ಉಳಿತಾಯವಾಗುತ್ತದೆ ಎನ್ನುತ್ತಾರೆ. ಆರೋಪಿಯ ಪರಿಚಯವಿದೆ. ಸದರಿಯವರು ಬೆಂಗಳೂರಿನಲ್ಲಿರುವ ಹೌಸಿಂಗ್ ಬೋರ್ಡ್ ನಲ್ಲಿರುವ ನನ್ನ ತಂಗಿ ಗೀತಾರವರ ಮನೆ ಪಕ್ಕದಲ್ಲಿ ವಾಸಿಸುತ್ತಾರೆ. ಆರೋಪಿಯವರು ಸುಮಾರು 10-12 ವರ್ಷದಿಂದ ಪರಿಚಯವಿದ್ದಾರೆ.

ಆರೋಪಿಯವರಿಗೆ ಎಷ್ಟು ವಯಸ್ಸು ಎಂದು ನನಗೆ ಗೊತ್ತಿಲ್ಲ. ಸದರಿಯವರಿಗೆ ಪ್ರಸ್ತುತ 25 ವರ್ಷ ಎಂದರೆ ನನಗೆ ಗೊತ್ತಿಲ್ಲ. ಹಣ ನೀಡುವ ಪೂರ್ವದಲ್ಲಿ ಎಷ್ಟು ಭಾರಿ ಭೇಟಿ

ಮಾಡಿದ್ದೀರಾ ಎಂದರೆ ನನ್ನ ತಂಗಿಯ ಮನೆಗೆ 8-10 ಭಾರಿ ಬಂದಿದ್ದು ಭೇಟಿ ಮಾಡಿದ್ದೇನೆ. ಆರೋಪಿಯ ತಂದೆತಾಯಿ ಕೂಡಾ ಪರಿಚಯ ಎನ್ನುತ್ತಾರೆ. ಆರೋಪಿಯ ತಂದೆತಾಯಿಯ ಹೆಸರು ಕೃಷ್ಣೇಗೌಡ ಮತ್ತು ಸುಜಾತ. ಆರೋಪಿಯವರು ಏನು ಕೆಲಸ ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು  ಅವರ ತಾಯಿಯು ಬ್ಯಾಂಕಿನಲ್ಲಿ ಕೆಲಸ ಮಾಡುತ್ತಾರೆ ಎನ್ನುತ್ತಾರೆ. ನಾನು ಸಾಲ ನೀಡುವ ಕಾಲಕ್ಕೆ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದರು ಎಂದು ಹೇಳಿದ್ದರೇ ಎಂದರೆ ಸಾಕ್ಷಿಯು ಅವರ ತಾಯಿಯು ಹೇಳಿದ್ದರು ಎನ್ನುತ್ತಾರೆ. ಆ ವಿಚಾರವನ್ನು ಆರೋಪಿಯು ಹೇಳಿಲ್ಲ ಎಂದರೆ ಹಣ ಪಡೆದಾಗ ಹೇಳಿದ್ದರು ಎನ್ನುತ್ತಾರೆ. ಆರೋಪಿ ಮತ್ತು ನನ್ನ ನಡುವೆ ಪರಿಚಯವೇ ಇಲ್ಲ ಎಂದರೆ ಸರಿಯಲ್ಲ.  ಆರೋಪಿಯವರು ಸಾಲದ ದಿನಾಂಕದಲ್ಲಿ ಬಿ.ಕಾಂ., ಓದುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.  ದಿಃ06-12-2021 ರಲ್ಲಿ ಬಿ. ಕಾಂ., ಮುಗಿಸಿದ್ದಾರೆಂದರೆ ನನಗೆ ಗೊತ್ತಿಲ್ಲ.  ಆರೋಪಿಯವರು ಏನು ವ್ಯವಹಾರ ಮಾಡಲು ಸಾಲ ಕೇಳಿದ್ದರು ಎಂದು ಹೇಳಿದ್ದಾರೆಯೇ ಎಂದರೆ ಸಾಕ್ಷಿಯು ಅವರ ತಂದೆತಾಯಿ ಮನೆ ಬದಲಾಯಿಸಬೇಕೆಂದು ಸಾಲ ನೀಡಲು ಕೇಳಿದ್ದರು ಎನ್ನುತ್ತಾರೆ.  ನಾನು 2,75,000/- ಹಣವನ್ನು ಬೆಂಗಳೂರಿನ ನನ್ನ ತಂಗಿಯ ಮನೆಗೆ ಹೋಗಿ ಕೊಟ್ಟಿರುತ್ತೇನೆ.  ಸದರಿ ವೇಳೆಯಲ್ಲಿ ಆರೋಪಿ ಮತ್ತು ಆಕೆಯ ತಂದೆತಾಯಿ ಇದ್ದರು. 2,75,000/- ನ್ನು ಆರೋಪಿ ಮತ್ತು ತಂದೆತಾಯಿ ಸೇರಿ ಕೇಳಿದ್ದಾರೆ. ಸಾಕ್ಷಿ ಮುಂದುವರೆದು 5 ಲಕ್ಷ ಕೇಳಿದ್ದು 2,75,000/- ನೀಡಿದ್ದೇನೆ ಎನ್ನುತ್ತಾರೆ. ಸದರಿಯವರಿಗೆ ಸದರಿ ಸಾಲವನ್ನು ತೀರಿಸಲು ಸಾಮರ್ಥ್ಯ ಇದೆಯೇ ಎಂದು ಅವರಿಗಿರುವ ಆಸ್ತಿ ಮತ್ತು ವ್ಯವಹಾರದ ಬಗ್ಗೆ ವಿಚಾರಿಸಿದ್ದೆ. ಆರೋಪಿಯ ತಂದೆತಾಯಿಯ ಚೆಕ್ ನ್ನು ಪಡೆಯದೇ ಆರೋಪಿಯ ಚೆಕ್ ನ್ನು ಏಕೆ ಪಡೆದಿದ್ದೀರಾ ಎಂದರೆ ಸಾಕ್ಷಿಯು ನನಗೇನು ಗೊತ್ತು

ಆರೋಪಿಯ ತಾಯಿ ಕೊಟ್ಟಿದ್ದಾರೆ ಎನ್ನುತ್ತಾರೆ. ಆರೋಪಿಯ ತಂದೆತಾಯಿ ಚೆಕ್ ನ್ನು ಪಡೆಯಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಾಗಲಿಲ್ಲ ಆದರೆ ನನ್ನ ಮುಂದೆ ಸಹಿ ಮಾಡಿ ಕೊಟ್ಟಿರುತ್ತಾರೆ ಎನ್ನುತ್ತಾರೆ. ಆರೋಪಿಗೆ ನಾನು ಯಾರು ಎಂದು ಗೊತ್ತಿಲ್ಲ ಮತ್ತು ನಿಪಿ-1 ಕ್ಕೆ ಆರೋಪಿ ಸಹಿ ಮಾಡಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಿವಾದಿತ ಸಾಲದ ದಿನಾಂಕದಲ್ಲಿ ಆರೋಪಿ ವಿದ್ಯಾರ್ಥಿಯಾಗಿದ್ದರಿಂದ ಅವರಿಗೆ ಯಾವುದೇ ವ್ಯವಹಾರ ಇಲ್ಲದ ಕಾರಣ ನನ್ನಿಂದ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು 2,75,000/- ನ್ನು ನಗದು ರೂಪದಲ್ಲಿ ನೀಡಿದ್ದೇನೆ. ಸದರಿಯವರು ವಿದ್ಯಾರ್ಥಿಯಾಗಿದ್ದರಿಂದ ಸಾಲ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿಯು ಅವರ ತಂದೆತಾಯಿ ಕೇಳಿದ್ದು ಚೆಕ್ ಯಾರದು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

**ಮುಂದುವರೆದ ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು ಈಗಾಗಲೇ ದಿಃ18-01-2024 ರಿಂದ ಪಾಟೀಸವಾಲಿಗಾಗಿ ಬಾಕಿಯಿದ್ದು, ಪಾಟೀಸವಾಲು ಮಾಡದೇ ಕಾಲಹರಣ ಮಾಡಿರುವುದರಿಂದ ಮುಂದುವರೆದ ಪಾಟೀಸವಾಲು ಇಲ್ಲ ಎಂದು ಪರಿಗಣಿಸಿ ಕೋರಿಕೆಯನ್ನು ತಿರಸ್ಕರಿಸಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು